5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10001/2022

ಪಿಡಬ್ಲ್ಯೂ- 03
ಸಿಡಬ್ಲ್ಯೂ-04

| | | |
|---|---|---|
| ಸಾಕ್ಷಿ ಹೆಸರು | - | ವಾಸುದೇವ |
| ತಂದೆ ಹೆಸರು | - | ರಂಗನಾಥ |
| ವಯಸ್ಸು | - | 27 ವರ್ಷ |
| ಉದ್ಯೋಗ | - | ಚಾಲಕ |
| ವಿಳಾಸಃ | - | ರಿಪ್ಪನ್ ಪೇಟೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 05–08–2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಚಾಸಾ -5 ನನಗೆ ಗೊತ್ತು. 1 ನೇ ಆರೋಪಿ ಗೊತ್ತು. ದಿನಾಂಕಃ11-09-2019 ರಂದು ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆಗೆ ಬರಬೇಕು ಎಂದು ನೋಟೀಸ್ ನ್ನು ನನಗೆ ಮತ್ತು ಚಾಸಾ-5 ರವರಿಗೆ ಜಾರಿ ಮಾಡಿದ್ದರು. ಸಾಕ್ಷಿಯು ಸದರಿ ನೋಟೀಸ್ ನ್ನು ನೋಡಿ ಗುರುತಿಸಿದ್ದು ಸದರಿ ನೋಟೀಸ್ ನ್ನು ನಿಪಿ -7 ಎಂದು ಸಾಕ್ಷಿಯ ಸಹಿಯನ್ನು ನಿಪಿ -7 (ಎ) ಎಂದು ಗುರುತಿಸಲಾಯಿತು. ನಂತರ ಪೋಲೀಸರು ಬೆಳಿಗ್ಗೆ 11 ಗಂಟೆಗೆ ರಿಪ್ಪನ್ಪೇಟೆ ಪೋಲೀಸ್ ಠಾಣೆಗೆ ಬರಲು ತಿಳಿಸಿದ್ದು ನಾನು ಮತ್ತು ಚಾಸಾ -5 ರವರು ಹೋಗಿರುತ್ತೇವೆ. ಪೋಲೀಸ್ ಠಾಣೆಗೆ ನಾವು ಹೋದಾಗ ಠಾಣೆಯಲ್ಲಿ ಚಾಸಾ - 27 ರವರು ಇದ್ದರು.

1 ನೇ ಆರೋಪಿಯು ಪ್ರಾ ಸಾ -1 ರವರಿಗೆ ಮು ಮಾ -1 ಚಾಕುವಿನಿಂದ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿ ಮು ಮಾ -1 ನ್ನು ತೋರಿಸಿರುತ್ತಾರೆ. ಮು ಮಾ -1, 1 ನೇ ಆರೋಪಿಯ ಕೈಯಲ್ಲಿ ಇತ್ತು. ಸದರಿ ಮು ಮಾ-1 ಚಾಕುವನ್ನು ಪೋಲೀಸರು ಬಟ್ಟೆಯಲ್ಲಿ ಸುತ್ತಿ ಪ್ಯಾಕ್ ಮಾಡಿ ಸೀಲ್ ಮಾಡಿ ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಪೋಲೀಸರು ಮು ಮಾ

-1 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಬೆಳಿಗ್ಗೆ 11 ಗಂಟೆಯಿಂದ ಮದ್ಯಾಹ್ನ 12 ಗಂಟೆ ವರೆಗೆ ಬರವಣಿಗೆ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಬರವಣಿಗೆ ಜಪ್ತು ಮಹಜರ್ ಆಗಿದ್ದು ಅದನ್ನು ನಿಪಿ -8 ಸಾಕ್ಷಿಯ ಸಹಿಯನ್ನು ನಿಪಿ -8(ಎ) ಎಂದು ಗುರುತಿಸಲಾಯಿತು. ನಿಪಿ -8 ಕ್ಕೆ ನನ್ನ ಜೊತೆಯಲ್ಲಿ ಚಾಸಾ-5 ಸಹಿ ಮಾಡಿರುತ್ತಾರೆ.

ಪೋಲೀಸರು ನಿಪಿ -8 ರ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -9 ಎಂದು ಗುರುತಿಸಲಾಯಿತು. ನಿಪಿ -9 ರಲ್ಲಿ ನಾನು, ಚಾಸಾ-5 , ಚಸಾ27 , 1 ನೇ ಆರೋಪಿ ಮತ್ತು ಇನ್ನೊಬ್ಬರು ಇರುತ್ತೇವೆ. ಆ ದಿನ ಪೋಲೀಸರು ಅಮಾನತ್ತುಪಡಿಸಿಕೊಂಡ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಚಾಕುವನ್ನು ಈಗಾಗಲೇ ಮು ಮಾ -1 ಎಂದು ಗುರುತಿಸಲಾಗಿದೆ. ಅದರ ಮೇಲೆ ಇರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ. ಆ ದಿನ ಮು ಮಾ -1 ನ್ನು ಹಾಜರುಪಡಿಸಿದ 1 ನೇ ಆರೋಪಿ ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ</u>

ಪೋಲೀಸರು ನನಗೆ ನೋಟೀಸ್ ಜಾರಿ ಮಾಡಿದಾಗ ನಾನು ಬಸ್ ನಿಲ್ದಾಣದಲ್ಲಿ ಆಟೋ ಓಡಿಸುತ್ತಿದ್ದೆ. ನನಗೆ ಬೆಳಿಗ್ಗೆ 10 ಗಂಟೆಗೆ ನೋಟೀಸ್ ಜಾರಿ ಮಾಡಿ ಬೆಳಿಗ್ಗೆ 11 ಗಂಟೆಗೆ ಸ್ಥಳಕ್ಕೆ ಬರಲು ತಿಳಿಸಿರುತ್ತಾರೆ. ನಾನು ಹೋದ ನಂತರ ಪೋಲೀಸರು ಸ್ಥಳದಲ್ಲಿ ಬರವಣಿಗೆ ಮಾಡಿರುತ್ತಾರೆ. ನಾನು ಹೋದಾದಗ ಪೋಲೀಸರು ಮು ಮಾ -1 ನ್ನು ಟೇಬಲ್ ಮೇಲೆ ಇಟ್ಟಿದ್ದರು ಆದರೆ ಅದಕ್ಕೆ ಸಂಬಂಧಪಟ್ಟ ಬಟ್ಟೆ , ಚೀಟಿ ಇರಲಿಲ್ಲ. ಮು ಮಾ -1 ರಂತಹ ಚಾಕು ಚಿಕನ್ ಅಂಗಡಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ, ಕೋಳಿ ಪಂದ್ಯದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ಕೋಳಿ ಪಂದ್ಯದ ಆಡುತ್ತಿದ್ದ ಎಂದರೆ ಹೌದು. ಕೋಳಿ ಪಂದ್ಯವನ್ನು ಲಂಬಾಣಿ ಜನಾಂಗದವರು, ದಕ್ಷಿಣ ಕನ್ನಡದವರು ಆಡುತ್ತಾರೆ ಎಂದರೆ ಹೌದು. ಮು ಮಾ -1 ನ್ನು ನಾನು ಕೈಯ್ಯಲ್ಲಿ ಹಿಡಿದು ನೋಡಿರುವುದಿಲ್ಲ. ಮು ಮಾ -1 ನ್ನು ಪೋಲೀಸರು

ಟೇಬಲ್ ಮೇಲೆ ಇಟ್ಟಿದ್ದು ಬರವಣಿಗೆ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಹೌದು. 1 ನೇ ಆರೋಪಿ ನನಗೆ ಮೊದಲಿನಿಂದಲೂ ಪರಿಚಯ. 1 ನೇ ಆರೋಪಿಯ ಮನೆ ನಮ್ಮ ಮನೆಯಿಂದ ದೂರ ಇರುತ್ತದೆ ಎಂದರೆ ಹೌದು. ಪ್ರಾ ಸಾ -1 ನನಗೆ ಅಷ್ಟು ಪರಿಚಯ ಇಲ್ಲ. ನನಗೆ ಗಲಾಟೆ ವಿಷಯ ಗೊತ್ತಿಲ್ಲ. ಪೋಲಿಸರು ಗಲಾಟೆಯಾಗಿದೆ ಮಹಜರ್ ಗೆ ಬನ್ನಿ ಎಂದು ಹೇಳಿದ್ದರಿಂದ ನನಗೆ ಗಲಾಟೆ ವಿಷಯ ಗೊತ್ತಾಯಿತು ಎಂದರೆ ಹೌದು. ಪೋಲೀಸರು ಮಹಜರ್ ಇದೆ ಬನ್ನಿ ಎಂದು ಹೇಳಿದ್ದರು ಅಲ್ಲಿ ಹೋದ ನಂತರ ಚಾಕು ಮಹಜರ್ ಮಾಡಿರುತ್ತಾರೆ. ಮು ಮಾ -1 ಕ್ಕೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ,

ಪೋಲೀಸರೇ ಮು ಮಾ -1 ನ್ನು ಕೋಳಿ ಪಂದ್ಯ ಆಡುವವರ ಕಡೆಯಿಂದ ತರಿಸಿ ಮಹಜರ್ ಮಾಡಿದ್ದರು ಅದಕ್ಕೆ ನಾವು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮು ಮಾ -1 ಕ್ಕೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಪ್ರಾ ಸಾ -1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ವಕೀಲರಿಂದಃ**

1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ವಕೀಲರಿಂದಃ**

ನಮ್ಮ ಆಟೋ ಸ್ಟಾಂಡ್ ಪೋಲೀಸ್ ಠಾಣೆಯಿಂದ 300 ಮೀಟರ್ ದೂರ ಇರುತ್ತದೆ. ಆಟೋಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಅಪಘಾತ ಆದರೆ ನಾನು ಪೋಲೀಸ್ ಠಾಣೆಗೆ ಹೋಗಿ ಬರುತ್ತೇನೆ ಮತ್ತು ನನಗೆ ಪೋಲೀಸರ ಪರಿಚಯ ಇದೆ ಎಂದರೆ ಹೌದು. ಪೋಲೀಸರು ನಾನು ಮತ್ತು ಶರತ್ ಕುಮಾರ್ ಆಟೋ ಸ್ಟಾಂಡ್ ನಲ್ಲಿ ಇದ್ದಾಗ 9-45 ಗಂಟೆಗೆ ಒಂದು ಸಾರಿ ಬಂದು ಹೋಗಿದ್ದರು , ಬೆಳಿಗ್ಗೆ 10-15 ಗಂಟೆಗೆ ಪೋಲೀಸರು ನನಗೆ ಮತ್ತು ಚಾಸಾ-5 ರವರಿಗೆ

ಆಟೋ ಸ್ಟಾಂಡ್ ನಲ್ಲಿ ನೋಟೀಸ್ ನ್ನು ಕೊಟ್ಟಿದ್ದರು. ಆಗಾಗ ನಾನು ಪೋಲೀಸ್ ಠಾಣೆಗೆ ಹೋಗಿ ಬರುವುದರಿಂದ ಪೋಲೀಸರು ಹೇಳಿದ ಮಾತು ಕೇಳುತ್ತೇನೆ ಎಂದರೆ ಹೌದು.

ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ಹೌದು. ಪೋಲೀಸರು ನಮಗೆ ಯಾವುದೇ ನೋಟೀಸ್ ಕೊಟ್ಟಿಲ್ಲ , ನಾವು ಠಾಣೆಗೆ ಹೋಗಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮು ಮಾ -1 ನ್ನು ಪೋಲೀಸರು ಹಾಜರುಪಡಿಸಿದಾಗ ಪೋಲೀಸರನ್ನು ಸೇರಿಸಿ 10 ಜನ ಇದ್ದೆವು. ಸದರಿ 10 ಜನರನ್ನು ಸೇರಿಸಿ ಪೋಲೀಸರು ಫೋಟೋ ತೆಗೆದಿರುವುದಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ ಪೋಲೀಸರು ಯಾವುದೇ ಮಹಜರ್ ಮಾಡಿಲ , ಅದರ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).